(ಇ) ಬಾಗೂರು ಮತ್ತು ನುಗ್ಗೆಹಳ್ಳಿ ಸುರಂಗ ಮಾರ್ಗದಲ್ಲಿ ನೀರು ಬಿಡುವ ವಿಚಾರ.

+ ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ): ಮಾನ್ಯ ಉಪಾಧ್ಯಕ್ಷರೇ, ನಮ್ಮಲ್ಲಿ ತೋಡಿರತಕ್ಕಂಥ ಒಂದು ಸುರಂಗ ಮಾರ್ಗವನ್ನು ಮೂರೂವರೆ ಲಕ್ಷ ಎಕರೆಗೆ ನೀರು, ಅದು ತುಮಕೂರು ಮತ್ತು ಮಂಡ್ಯ ಜನರಿಗೆ ಬಿಡುವಂತಹ ಸಂದರ್ಭದಲ್ಲಿ 1979ನೇ ಇಸವಿಯಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ದಿವಂಗತ ದೇವರಾಜ್ ಅರಸ್ ಅವರು ಹೇಳಿದ ಮಾತನ್ನು ಇವತ್ತು ನಮ್ಮ ಜನ ನೊಂದು ಹೇಳುತ್ತಿದ್ದಾರೆ. ಈ ಒಂದು ಸುರಂಗ ಮಾರ್ಗ ತೋಡುತ್ತಿದ್ದೇವೆ. ನಾಳೆ ಅಲ್ಲಿ ಇರತಕ್ಕಂಥ ಕೆರೆಕಟ್ಟೆಗಳೆಲ್ಲಾ ಒಣಗಿ ಹಕ್ಕಿ ಪ್ರಾಣಿಗಳು ಕುಡಿಯುವುದಕ್ಕೆ ನೀರು ಇಲ್ಲದೇ ಹೋಗಬಹುದು ಎಂದು ಭಾಷಣ ಮಾಡಿದ್ದರು. ಅಂದಿನ ಆ ಸಮಾರಂಭದಲ್ಲಿ ಮಾತನಾಡಿದ ಭಾಷಣವನ್ನು ಇವತ್ತು ನಮ್ಮ ಜನ ನೆನಪಿಸಿಕೊಂಡು ಪರಿತಪಿಸುತ್ತಿದ್ದಾರೆ. ಅದರ ಸಲುವಾಗಿ ಇವತ್ತು ಏನು ಆ ಭಾಗದಲ್ಲಿ ನೀರು ಹರಿಯುತ್ತಿದ್ದರೂ ಇಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಬಹುಶಃ 250 ಅಡಿ ಆಳದಲ್ಲಿ ಸುರಂಗ ಮಾರ್ಗವನ್ನು ತೋಡಿರುವುದರ ಫಲವಾಗಿ ಬಾಗೂರು ಮತ್ತು ನುಗ್ಗೆಹಳ್ಳಿ ಹೋಬಳಿ ಏನಿದೆ ಆ ಎರಡು ಹೋಬಳಿ ಜನರಿಗೆ ಸೀಪೇಜ್ ವಾಟರ್ ಎನ್ನುವುದು ಹೋಗಿ ಇವತ್ತು ಏನೂ ಬೆಳೆಯದೆ ಇರುವಂತಹ ಪರಿಸ್ಥಿತಿ ಬಂದಿದೆ. ತೆಂಗಿನ ಕಾಯಿ ಕೂಡ ಆ ಭಾಗದಲ್ಲಿ ಫಲವತ್ತಾಗಿ ಬೆಳೆಯುತ್ತಿದ್ದವು. ಆ ಜಾಗದಲ್ಲಿ ಇವತ್ತು ದೇವರಿಗೆ ಒಡೆಯುವುದಕ್ಕೆ ಕೂಡ ಕಾಯಿ ಸಿಗುತ್ತಾ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಆ ಭಾಗಕ್ಕೆ ಎರಡು ಲಿಫ್ಟ್ ಇರಿಗೇಷನ್ 1985ನೇ ಇಸವಿಯಲ್ಲಿ ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅದನ್ನು ಮನಗಂಡು ಮಂಜೂರಾತಿ ಮಾಡಿದ್ದು, ಅದು ಇನ್ನೂ ಕೂಡ ಕುಂಟುತ್ತಿದೆ. ಮಾನ್ಯ ನಾಗೇಗೌಡರಿಗೆ ಎನು ಪ್ರಶ್ನೆಯನ್ನು ಕೇಳುತ್ತಿದ್ದೇನೆಂದರೆ ನಾವು ಈ ರಾಜ್ಯದ ಜನ ಅಥವಾ ಚನ್ನರಾಯ ಪಟ್ಟಣದ ಜನ ಬಾಗೂರು ನವಿಲೆ ಜನ, ನೀವೇನು ತುಮಕೂರು ಮಂಡ್ಯಕ್ಕೆ ನೀರು ಕೊಟ್ಟಿರಲ್ಲಾ, ನಿಮಗೆ ನಮ್ಮ ಬಗ್ಗೆ ಜವಾಬ್ದಾರಿ ಇಲ್ಲವೇ ಎನ್ನುವುದನ್ನು ಆವೇಶದಿಂದ ಈ ಮಾತನ್ನು ಹೇಳಬೇಕಾಗುತ್ತದೆ. ಎರಡು ಎರಡೂವರೆ ವರ್ಷಗಳ ಹಿಂದೆ ಇಲ್ಲಿಗೆ ಬಂದಂತಹ ಸಂದರ್ಭದಲ್ಲಿ ಕೂಡ ನಮ್ಮ ಜನ ನಿಮ್ಮ ಎದುರುಗಡೆ ಪ್ರತಿಭಟನೆ ಮಾಡಿ ತುಮಕೂರಿಗೆ ನೀರು ಬಿಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಆಗ ಶ್ರೀಮಾನ್ ಜಯಚಂದ್ರ ಅವರು ಇದ್ದರು, ಗುಬ್ಬಿ ತಾಲ್ಲೂಕಿನ ಶಿವನಂಜಪ್ಪ ಕೂಡ ಇದ್ದರು. ಅವರು ಊಟ ಮಾಡತಕ್ಕಂಥ ಅನ್ನ ನೋಡಿ ನಾವು ಜೊಲ್ಲು ಸುರಿಸಬೇಕಾದಂತಹ ಪರಿಸ್ಥಿತಿ ಬರುತ್ತದೆ ಎಂದು ಹೇಳಿ ಇವತ್ತೂ ಕೂಡ ಆ ಸುರಂಗ ಮಾರ್ಗ ಹೋಗಿರುವಂತಹ ಆ ಭಾಗದ ಜನಕ್ಕೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಇದು ಎಷ್ಟೊಳ್ಳೆ ಗಂಭೀರವಾದಂತದ್ದು ನಾಳೆ ತುಮಕೂರಿಗೆ ನೀರು ಬಿಡುವುದಿಲ್ಲವೆಂದು ಹೇಳಿ ನಾಲ್ ತೋಡಿರತಕ್ಕಂಥ ಜಾಗದಲ್ಲಿ ಜನ ಕುಳಿತಿದ್ದಾರೆ. ನಾವು ಕೂಚ್ಚಿ ಹೋದರೂ

ಸಹ ನಾವು ಏಳುವುದಿಲ್ಲವೆಂದು ಕುಳಿತಿದ್ದಾರೆ. ನಾಳೆ ನಮಗೆ, ತುಮಕೂರು, ಮಂಡ್ಯಕ್ಕೆ ಬಹಳ ದೊಡ್ಡ ಜಗಳವಾಗುತ್ತದೆ. ಇದನ್ನು ಬಗೆಹರಿಸಬೇಕು. ಜನ ಕೇಳುತ್ತಿರುವುದು ನ್ಯಾಯಬದ್ಧವಾಗಿದೆ. ಇವತ್ತು 330 ಕೋಟಿ ರೂಪಾಯಿ ನೀರಾವರಿಗೆ ದುಡ್ಡನ್ನು ಕೊಟ್ಟರೂ ಮೂರು ವಲಯಗಳಾದ ಮೈಸೂರು, ತುಮಕೂರು ಮತ್ತು ಗೊರೂರಿಗೆ 50 ಕೋಟಿ ರೂಪಾಯಿ ಕೊಟ್ಟು ಅದರಲ್ಲಿ ಸುರಂಗ ಕೆಲಸಕ್ಕೆ ಮೂರೂವರೆ ಕೋಟಿ ಕೊಟ್ಟರೆ ಯಾರು ಅಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದೆ? ಎಷ್ಟು ಜನ ನೀರಾವರಿ ಕಾರ್ಯದರ್ಶಿಗಳು ಆ ಭಾಗಕ್ಕೆ ಹೋಗಿದ್ದಾರೆ? ಮೂರೂವರೆ ಲಕ್ಷ ಎಕರೆಗೆ ನೀರು ಕೊಟ್ಟಂತಹ ಜನ ಇವತ್ತು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಅವರು ಊಟ ಮಾಡತಕ್ಕಂಥಾದ್ದು ನೋಡಿ, ನಮ್ಮ ಮನೆಯಲ್ಲಿ ಹಬ್ಬದ ದಿವಸವಾದರೂ ನೀರು ಕುಡಿಯಬಾರದೇ ಓಟ್ಟು ತಿನ್ನಬಾರದೇ ಎನ್ನುವಂತಹ ಸನ್ನಿವೇಶ ಇದೆ.

ಉಪಾಧ್ಯಕ್ಷರು: ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಅಲ್ಲಿ ಜನ ಕೆನಾಲ್‌ನಲ್ಲಿ ಕುಳಿತಿದ್ದಾರೆ. ಇವತ್ತು ಅಲ್ಲಿಂದ ಏಳುವುದಿಲ್ಲ, ನಾವು ತುಮಕೂರು, ಮಂಡ್ಯಕ್ಕೆ ನೀರು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿನ ಜನರಿಗೆ ಅನ್ಯಾಯವಾಗಿರತಕ್ಕಂಥ ತೆಂಗಿನ ಗಿಡಗಳಿಗೆ ಪರಿಹಾರವನ್ನು ಕೊಡಬೇಕು. ನವಿಲೆ ಮತ್ತು ಬಾಗೂರು ಸುರಂಗ ಮಾರ್ಗ ಏನಿದೆ ಅಲ್ಲಿ ಲಿಫ್ಟ್ ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಕೊಡಬೇಕು. ಮತ್ತು ಕಲ್ಲೇಸೋಮನಳ್ಳಿಯಲ್ಲಿ ಲಿಫ್ಟ್ ಇರಿಗೇಷನ್ ಮಂಜೂರಾತಿ ಮಾಡಬೇಕು. ಮತ್ತು ಅಲ್ಲಿ ಏನು ಟನಲ್ ಹೋಗುವ ಜಾಗದಲ್ಲಿ ಬಿಟ್ಟಿದ್ದೀರಿ, 6-7 ಹಳ್ಳಿಗಳನ್ನು ನಮಗೆ ಮಾಡಿಕೊಡಬೇಕು. ಆ ಜನಕ್ಕೆ ಪರಿಹಾರ ಕೊಡಬೇಕು. ತುಮಕೂರು ಮಂಡ್ಯ ಬಯಲು ನಾಡು ಎಂದಿರಿ. ಮಾತು ಎತ್ತಿದರೆ ಉತ್ತರ ಕರ್ನಾಟಕ ಎಂದರೆ, ನಾವೆಲ್ಲಾ ಹಾಗಾದರೆ ಪಾಪದವರೇ? ನಮ್ಮ ಜನರ ಸಮಸ್ಯೆಯನ್ನು ದಯಮಾಡಿ ಶಾಸನ ಸಭೆಯಲ್ಲಿ ಕೇಳಬೇಕು. ಸರ್ಕಾರ 330 ಕೋಟಿ ರೂಪಾಯಿಯಲ್ಲಿ 50 ಕೋಟಿ ರೂಪಾಯಿ ಗೊರೂರಿಗೆ ಕೊಟ್ಟಿದ್ದೀರಿ. ಮಾನ್ಯ ಅರ್ಥಸಚಿವರು ಸಭೆಯಲ್ಲಿ ಇದ್ದಾರೆ. ಅದನ್ನು ದಯಮಾಡಿ ಪರಿಶೀಲಿಸಬೇಕು. ಆ ಭಾಗದ ಜನರನ್ನು ನೀವು ನೋಡಬೇಕು. ಎಲ್ಲಾ ಪಕ್ಷದ ಶಾಸಕರು ಕುಳಿತಿದ್ದಾರೆ. ಜಯಚಂದ್ರ ಬಂದಿದ್ದರು. ಅವರಿಗೆ ಪರಿಹಾರ ಕೊಡಬೇಕು. ಸಭೆಯನ್ನು ಮಾಡಿ ಆ ಭಾಗದ ಎಲ್ಲಾ ರೈತರ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಮತ್ತು ಕಾವೇರಿ ಜಲಾನಯನ ಪ್ರದೇಶಕ್ಕೆ ಹೇಮಾವತಿ ಪ್ರಾಜೆಕ್ಟ್‌ನಲ್ಲಿ ದುಡ್ಡನ್ನು ಕಡಿಮೆ ಕೊಟ್ಟಿದ್ದಾರೆ. 320 ಕೋಟಿ ರೂಪಾಯಿಯಲ್ಲಿ 55 ಕೋಟಿ ರೂಪಾಯಿ ಮೂರು ವಲಯದಲ್ಲಿ ನಮಗೆ ಕೊಟ್ಟರೆ ನಾವು ಮಾಡಿದ್ದು ಏನು ಪಾಪ? ಮತ್ತು ಬೆಳಿಗ್ಗೆ ಎದ್ದರೆ ಕೃಷ್ಣಾ ಬೇಸಿನ್‌ಗೆ ಕೊಡುತ್ತೇವೆಂದರೆ ಕಾವೇರಿ ಭಾಗದ ಜನ ನಾವೇನು ಪಾಪ ಮಾಡಿದ್ದೇವೆ. ದಯಮಾಡಿ ಹಣವನ್ನು ಹೆಚ್ಚು ಬಿಡುಗಡೆ ಮಾಡಬೇಕು. ತ್ವರಿತ ಗತಿಯಲ್ಲಿ ಕೆಲಸ ಮಾಡಿಕೊಡಬೇಕು. ಪರಿಹಾರ

ಕೊಡಬೇಕೆಂದು ಈ ಮೂಲಕ ಮನವಿ ಮಾಡಿ ಸರಿಯಾದಂತಹ ಸೂಕ್ತ ಕ್ರಮವನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ): ಮಾನ್ಯ ಉಪಾಧ್ಯಕ್ಷರೇ, ಬಹಳ ಪ್ರಮುಖವಾದಂತಹ ವಿಚಾರವನ್ನು ಮಾನ್ಯ ಪುಟ್ಟೇಗೌಡರು ತಿಳಿಸಿದ್ದಾರೆ. ಇನ್ನು ಪ್ರಮುಖವಾದಂತಹ ಸಮಸ್ಯೆಗಳನ್ನು ನಮ್ಮ ಹೇಮಾವತಿ ಯೋಜನೆ ಮತ್ತು ಶ್ರೀರಾಮದೇವರ ನಾಲೆ ವಿಚಾರ ಮಾತನಾಡಬೇಕಾಗಿದೆ. ಶ್ರೀರಾಮ ದೇವರ ನಾಲೆ 75 ಮೈಲಿ ಉದ್ದ ಇದೆ. ಅದು ಸುಮಾರು 150 ವರ್ಷಗಳಷ್ಟು ಹಳೆಯ ನಾಲೆಯಾಗಿದ್ದು, ಅದರ ಅರ್ಧ ಭಾಗಕ್ಕೆ ನೀರುಬರುತ್ತಿಲ್ಲ. ಇದಕ್ಕೆ ತಾಂತ್ರಿಕ ತೊಂದರೆ ಇರಬಹುದು. ಇದಕ್ಕೆ ನೀರಾವರಿ ಸಚಿವರು ಏನು ಕಾರಣಕ್ಕೆ ನೀರು ಬರುತ್ತಾ ಇಲ್ಲ ಎನ್ನುವುದನ್ನು ಹೇಳಬೇಕು. ಮತ್ತು ಅದಕ್ಕೆ ಎಷ್ಟು ಮಟ್ಟದ ನೀರು ಬರಬೇಕಾಗಿತ್ತು ಅಷ್ಟು ನೀರು ಆ ಕಾಲುವೆಯಲ್ಲಿ ನೀರು ಹರಿಯುತ್ತಾ ಇಲ್ಲ. ಮತ್ತು ಅನೇಕ ಅಕ್ರಮ ತೂಬುಗಳನ್ನು ಹಾಕಿಕೊಂಡು ಕೊನೇ ಭಾಗದ ರೈತರಿಗೆ ತೊಂದರೆಯಾಗಿದೆ. ದಯಮಾಡಿ ಇದಕ್ಕೆ ಒಂದು ಸಮಿತಿಯನ್ನು ನೇಮಿಸಿ ಯಾವ ಕಾರಣದಿಂದ ಅರ್ಧ ಭಾಗಕ್ಕೆ ನೀರು ಬರುತ್ತಿಲ್ಲ ಎನ್ನುವುದನ್ನು ಗಮನ ಹರಿಸಿ. ಇದಕ್ಕೆ ಸೂಕ್ತವಾದಂತಹ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ನೀರಾವರಿ ಸಚಿವರಿಗೆ ಹೇಳುತ್ತೇನೆ. ಜೊತೆಗೆ ಹೇಮಾವತಿ ಯೋಜನೆಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ನಂಜಾಮರಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪುಟ್ಟೇಗೌಡರು ಕೇಳುತ್ತಿರತಕ್ಕಂಥ ಪ್ರಶ್ನೆ ಕರೆಕ್ಟಾಗಿ ಇದೆ. ಅದನ್ನು ಈಡೇರಿಸದೆ ಇದ್ದರೆ...

ಉಪಾಧ್ಯಕ್ಷರು: ತಾವು ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ. ಉತ್ತರ ಹೇಳಿದ ಮೇಲೆ ತಾವು ಬೇಕಾದರೆ ಕ್ಲಾರಿಫಿಕೇಷನ್ ತೆಗೆದುಕೊಳ್ಳಿ.

ಶ್ರೀ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಉಪಾಧ್ಯಕ್ಷರೇ, ಕಾವೇರಿ ವಿಷಯದಲ್ಲಿ ನಮ್ಮದು ಬರುತ್ತದೆ. ಸಂಪರ್ಕ ನಾಲೆ ಸುಮಾರು 15 ವರ್ಷದಿಂದ ಪ್ರಾರಂಭವಾಗಿದೆ. ಆದರೆ ಕೆಲಸ ಮಾತ್ರ ಸ್ವಲ್ಪಸ್ವಲ್ಪ ನಡೆಯುತ್ತಿದ್ದರೂ, ಯಾವಾಗ ಕೇಳಿದರೂ ಅದಕ್ಕೆ ಹಣವಿಲ್ಲವೆಂದು ಹೇಳುತ್ತಿರುತ್ತಾರೆ. ಇ.ಸಿ.ಡಿ.ಎಸ್ ಮತ್ತು ಮಿರ್ಜಾ ನಾಲೆ ಕೂಡ ಬಹಳ ಹಳೆಯದಾಗಿದ್ದರೂ ಕೂಡ ಅದರಲ್ಲಿ ಯಾವುದೇ ಒಂದು ಕೆಲಸವಾಗದೇ ಕೊನೇ ಭಾಗದವರಿಗೆ ನೀರು ಸಮರ್ಪಕವಾಗಿ ಸರಿಯಾದ ರೀತಿಯಲ್ಲಿ ಹೋಗುತ್ತಿಲ್ಲ. ಆದುದರಿಂದ ಆ ಭಾಗಕ್ಕೆ ಕೂಡ ಹೆಚ್ಚು ಹಣ ಬಿಡುಗಡೆ ಮಾಡಿ. ಸಂಪರ್ಕ ನಾಲೆ 15 ವರ್ಷದ ಹಿಂದೆ ಪ್ರಾರಂಭವಾಗಿದ್ದರೂ ಕೂಡ ಆ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಏಕೆಂದರೆ ಸರಿಯಾಗಿ ಹಣ ಬಿಡುಗಡೆ

ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೂ ಕೂಡ ಸರಿಯಾದ ವ್ಯವಸ್ಥೆಯಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪುಟ್ಟೇಗೌಡರು ಎತ್ತಿರತಕ್ಕಂಥ ವಿಚಾರದಲ್ಲಿ ಹೇಳುವುದಾದರೆ ಬಾಗೂರು ನವಿಲೆ ಟನಲ್ ಹತ್ತಿರ ಲಿಫ್ಟ್ ಇರಿಗೇಷನ್ ಅನ್ನು 13 ಕೋಟಿ 20 ಲಕ್ಷ ರೂಪಾಯಿಗಳಲ್ಲಿ ರಿವೈಸ್ಡ್ ಕಾಸ್ಟ್‌ನಲ್ಲಿ ಮಂಜೂರು ಮಾಡಿ ಸುಮಾರು 5,824 ಎಕರೆಗೆ ನೀರು ಕೊಡಬೇಕೆಂದು ಆಲೋಚನೆ ಮಾಡಿದ್ದೇವೆ. ಇದಕ್ಕೆ ಬೇಕಾಗಿರತಕ್ಕಂಥ ನೀರಿದೆ. ಇಲ್ಲಿಯವರೆಗೆ ನಾಲ್ಕೂವರೆ ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದೇವೆ. ಇನ್ನು ಬೇರೆಬೇರೆ ಹಂತದಲ್ಲಿ ಕೆಲಸ ಇದೆ. ಈಗ ಅದನ್ನು ವಿವರಿಸುವುದಕ್ಕೆ ಸಮಯವಿಲ್ಲ. 1998-99ರ ಒಳಗೆ ಸಂಪೂರ್ಣವಾಗಿ ಇನ್ನು ಉಳಿದಿರತಕ್ಕಂಥ 9 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿ ಆ ಭಾಗಕ್ಕೆ ಲಿಫ್ಟ್ ಇರಿಗೇಷನ್‌ನಲ್ಲಿ ನೀರು ಕೊಡುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ. ಇನ್ನು ಎರಡನೆಯದಾಗಿ ಪರಿಹಾರ ಕೊಡಬೇಕೆನ್ನುವುದರ ಬಗ್ಗೆ ಹೇಳಿದ್ದು, ಟನಲ್ ಎಫೆಕ್ಟ್ ಆಗಿರತಕ್ಕಂಥ ಏರಿಯಾಗೆ ಈಗ ಅಸೆಸ್ ಮಾಡಿದ್ದೇವೆ. ಒಟ್ಟು 26 ಕೋಟಿ ರೂಪಾಯಿ ಬೆಳೆ ನಾಶವಾಗಿದೆ ಎಂದು ಸರ್ಕಾರ ಅಸೆಸ್ ಮಾಡಿದ್ದಾರೆ. ಕೃಷಿ ಇಲಾಖೆ, ಕಂದಾಯ ಹಾಗೂ ನೀರಾವರಿ, ಈ ಮೂರು ಇಲಾಖೆಗಳು ಮೀಟಿಂಗ್ ಕುಳಿತುಕೊಂಡು ಎಷ್ಟು ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಗಂಭೀರವಾಗಿ ಎಗ್ಸಾಮಿನ್ ಮಾಡುತ್ತದೆ ಎಂದು ಹೇಳುತ್ತೇನೆ. ಕಲ್ಲಸೋಮನಹಳ್ಳಿ ಲಿಫ್ಟ್ ಇರಿಗೇಷನ್ ಬಗ್ಗೆ ಹೇಳಿದ್ದಾರೆ. ಟೆಕ್ನಿಕಲ್ ಕಮಿಟಿ ಅಸೆಸ್ ಮಾಡಿದ್ದಾರೆ. ಎಂ.ಐ.ಪಿ.ಸಿ ಬೋರ್ಡ್ ಬಂದ ತಕ್ಷಣ ಅದನ್ನು ಮಂಜೂರು ಮಾಡಿಕೊಡುತ್ತೇವೆ. ಈಗಾಗಲೇ ಡೆಲಿಗೇಟ್ಸ್ ಬಂದು ಮುಖ್ಯಮಂತ್ರಿಗಳ ಹತ್ತಿರ ಒಂದು ಮೀಟಿಂಗ್ ಮಾಡಿ, ಮಾನ್ಯ ಮುಖ್ಯಮಂತ್ರಿಗಳೂ ಸಹ ಒಂದು ಮೀಟಿಂಗ್ ಕರೆಯುತ್ತೇವೆಂದು ಹೇಳಿದ್ದಾರೆ. ಅವರು ಬಂದ ತಕ್ಷಣ ಒಂದು ಮೀಟಿಂಗ್ ಫಿಕ್ಸ್ ಮಾಡಿ ಅವರನ್ನು ಕರೆಸಿ ಮಾತನಾಡುತ್ತೇವೆಂದು ಹೇಳುತ್ತೇನೆ. ಮಾನ್ಯ ಪ್ರಕಾಶ್ ಹಾಗೂ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ಹೇಳತಕ್ಕಂಥಾದ್ದು ಎಲ್ಲಾ ರಿವರ್ ಕೆನಾಲ್ಸ್.

1.50 ಪಿ.ಎಂ.

ಮಾನ್ಯ ಸದಸ್ಯರಾದ ಪ್ರಕಾಶ್‌ರವರು ಪ್ರಸ್ತಾಪ ಮಾಡಿರುವಂತಹ ಕೆನಾಲ್ 400-500 ವರ್ಷಗಳದ್ದು ಆಗಿದೆ. ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರವರು ಪ್ರಸ್ತಾಪ ಮಾಡಿರುವಂಥಾದ್ದು ಕಾವೇರಿ ಕೆನಾಲ್‌ಗೆ ಸೇರಿದ್ದು, ಇದಕ್ಕಾಗಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಆದುದರಿಂದ ಈ ಸಾರಿ ಹೊಸ ರಿವರ್ ಕೆನಾಲ್ ಹೆಡ್ ಅನ್ನು ಓಪನ್ ಮಾಡಿ ಅದಕ್ಕಾಗಿ 5 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆ. ಇದರ ಜೊತೆಗೆ ದೊಡ್ಡ ಸಮಸ್ಯೆ ಏನಾಗಿದೆ ಎಂದರೆ ಬಜೆಟ್‌ನಲ್ಲಿ 338

ಕೋಟಿ ರೂಪಾಯಿಗಳು ಇದೆ, ಇದಕ್ಕೆ 1900 ಕೋಟಿ ರೂಪಾಯಿಗಳು, ಬೇಕಾಗಿದೆ. ಅದರಲ್ಲಿ ಪೆಂಡಿಂಗ್ ಬಿಲ್‌ಗಳು 157 ಕೋಟಿ ರೂಪಾಯಿಗಳು ಇದೆ. ಆದರೆ ಬೇಡಿಕೆ 1900 ಕೋಟಿ ರೂಪಾಯಿಗಳು ಇದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ಮಾನ್ಯ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಕಾವೇರಿ ಭಾಗದಲ್ಲಿ ಬರುವಂತಹ ಶಾಸಕರುಗಳನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ನಾವು ಮೊನ್ನೆ ಸದನದಲ್ಲಿ ಬಿಲ್‌ಗಳು ಪೆಂಡಿಂಗ್ ಇದೆಯೋ ಎಂದು ಕೇಳಿದ್ದಕ್ಕೆ ಮಾನ್ಯ ನಾಗೇಗೌಡರು ಮತ್ತು ಮಾನ್ಯ ಸಿದ್ಧರಾಮಯ್ಯನವರು ಜಗಳಕ್ಕೆ ಬಂದಿದ್ದರು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ನಾವು ಬಿಲ್‌ಗಳು ಪೆಂಡಿಂಗ್ ಇಲ್ಲವೆಂದು ಹೇಳಲಿಲ್ಲ, 26 ಕೋಟಿ, 60 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇದೆ ಎಂದು ಹೇಳಿದ್ದೇವೆ. ನಾವು ಹೆಚ್ಚು ಕೆಲಸವನ್ನು ಮಾಡಿಸಿದ್ದೇವೆ, ಜಾಸ್ತಿ ಬಿಲ್‌ಗಳು ಪೆಂಡಿಂಗ್ ಇದೆ ಎಂದು ಹೇಳಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸಚಿವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ 225 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್‌ಗಳ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಕೃಷ್ಣ ಬೇಸಿನ್‌ದು ಎಷ್ಟು ಬಿಲ್ ಪೆಂಡಿಂಗ್ ಇದೆ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಕೃಷ್ಣ ಬೇಸಿನ್ ಬಿಲ್ ಬಾಕಿ ಇರುವುದಿಲ್ಲ? ಏಕೆಂದರೆ it will be paid by Krishna Jala Bhagya Nigam. ಇದಕ್ಕೆಲ್ಲಾ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ದುಡ್ಡು ಬರುವುದಿಲ್ಲ. ಅಲ್ಲಿ ಬರುವಂಥಾದ್ದು ಎರಡು ಡಿವಿಜನ್‌ಗಳು ಮಾತ್ರ, ಅದು ಬೆಳಗಾಂ ಜೋನ್ ಮತ್ತು ಹುಮ್ನಾಬಾದ್ ಜೋನ್ ಈ ಎರಡು ಜೋನ್‌ಗೆ ಮಾತ್ರ ನಾವು ಬರೀ ಇರೀಗೇಷನ್ ಡಿಪಾರ್ಟ್‌ಮೆಂಟ್‌ನಿಂದ ಕೊಡುವಂಥಾದ್ದು, ಕೃಷ್ಣ ಬೇಸಿನ್‌ನದು ಒಂದು ಪೈಸೆಯೂ ಪೆಂಡಿಂಗ್ ಇಲ್ಲ. ಆದರೆ ನಾವು ಕೂಡಲೇ ಹಣಕಾಸಿನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾವೇರಿ ಕೊಳ್ಳದಲ್ಲಿ ಬರುವಂತಹ ಶಾಸಕರನ್ನು ಕರೆದು ಎಲ್ಲಾ ಆರ್ಥಿಕ ಸಹಾಯವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ.ನಂಜಾಮರಿ: ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ತಿಪಟೂರು, ಅರಸೀಕೆರೆಗೆ ನೀರು ಕೊಡುತ್ತೇವೆಂದು ಹೇಳಿದ್ದಾರೆ, ಇದುವರೆಗೂ ಕೊಟ್ಟಿಲ್ಲ. ಇಲ್ಲಿ ನೀರು ಕೊಟ್ಟರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಪರಿಹಾರವನ್ನು ಕೊಡುವುದರ ಬಗ್ಗೆ ಒಪ್ಪಿದ್ದಾರೆ. ಎಲ್ಲಿ ಫೆಲ್ಯೂರ್ ಆಗಿದೆ ಅಲ್ಲಿ ಪರಿಹಾರವನ್ನು

ಕೊಡಲು ಒಪ್ಪಿದ್ದಾರೆ. ಆದರೆ ಅದರಲ್ಲಿ ಏನಾಗಿದೆ ಎಂದರೆ ಟೆಕ್ನಿಕಲ್ ಕಮಿಟಿಯವರು ಅಸೆಸ್ ಮಾಡಿದ್ದಾರೆ. ಅವರು ಅಲ್ಲಿ ಹೋದಂತಹ ಸಂದರ್ಭದಲ್ಲಿ ಆಜುಬಾಜಿನಲ್ಲಿ ಒಂದು ಕಿ.ಮೀ ಮಾತ್ರ ಅಸೆಸ್ ಮಾಡಿದ್ದಾರೆ. ಅಲ್ಲಿ ನಾವು ಮತ್ತು ಮಾನ್ಯ ಪುಟ್ಟೇಗೌಡರು ಹೋಗಿ ನೋಡಿದ್ದೇವೆ. ಅಲ್ಲಿ ತಾವು ಕೂಡ ಸಮಾರಂಭಕ್ಕೆ ಬಂದಂತಹ ಸಂದರ್ಭದಲ್ಲಿ ನೋಡಿದ್ದೀರಿ. ಸುಮಾರು 5 ಕಿ.ಮೀ. ಅಫೆಕ್ಟ್ ಆಗಿದೆ. ಆದುದರಿಂದ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಏನು ಅಸೆಸ್‌ಮೆಂಟ್ ಮಾಡಿದ್ದಾರೆ. ಅದನ್ನು ತಾವು ನಂಬಬೇಡಿ. ಅಲ್ಲಿ 5 ಕಿ.ಮಿ. ವರೆಗೆ ಲಾಸ್ ಆಗಿರುವಂಥಾದ್ದು ಅವೆಲ್ಲವನ್ನೂ ಸೇರಿಸಿ ಅಸೆಸ್ ಮಾಡಬೇಕು. ಲಿಫ್ಟ್ ಇರೀಗೇಷನ್ ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ದೇವೇಗೌಡರೂ ಕೂಡ ಆಶ್ವಾಸನೆಯನ್ನು ಕೊಟ್ಟಿರುವಂಥ ಸಂದರ್ಭದಲ್ಲಿ ಇದರ ಕಮಿಟ್‌ಮೆಂಟ್ ನಮ್ಮೆಲ್ಲರ ಮೇಲೆ ಇದೆ. ಮಾನ್ಯ ಪುಟ್ಟೇಗೌಡರು ಹೇಳುವಂಥಾದ್ದರಲ್ಲಿ ಅರ್ಥವಿದೆ. ದಯಮಾಡಿ ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ತಾವು ಗಮನ ಕೊಡಬೇಕು. ತಾವು 9 ಕೋಟಿ ರೂಪಾಯಿಗಳನ್ನು ಈ ಸಾಲಿನ ಬಜೆಟ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಇದು ಪೆಂಡಿಂಗ್ ಆಗಿ ಉಳಿಯಬಾರದು. ಇದಕ್ಕೆ ಹೆಚ್ಚಿನ ಸಹಾಯವನ್ನು ಅರ್ಥ ಸಚಿವರಿಂದ ತೆಗೆದುಕೊಂಡು ಮುಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಹೇಮಾವತಿ ನಾಲೆಗೆ ಈ ಸಾಲಿನಲ್ಲಿ ಕೊಟ್ಟಿರುವಂತಹ ಹಣ ಭಾರೀ ಕಡಿಮೆಯಾಗಿದೆ. ಈ ಸಾಲಿನಲ್ಲಿ ಅದನ್ನು ಹೆಚ್ಚಿಸಬೇಕೆಂದು ಮಾನ್ಯ ಆರ್ಥಿಕ ಸಚಿವರನ್ನು ಹಾಗೂ ನೀರಾವರಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ 30 ಕಿ.ಮೀ. ನಾಲೆಯಲ್ಲಿ ನೀರು ಹರಿಯುತ್ತಿದೆ. ದಯಮಾಡಿ ಅಲ್ಲಿ ಇರುವಂತಹ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

SRI K.N.NAGE GOWDA: We require nearly Rs.1900 crores. ನಮಗೆ ಕೊಟ್ಟಿರುವಂತಹ 330 ಕೋಟಿ ರೂಪಾಯಿಗಳು, ಅದರಲ್ಲಿ ಅರಿಯರ್ಸ್ ಅನ್ನು ಕ್ಯಾರಿ ಮಾಡಿದರೂ ಕೂಡ We can hardly spent about Rs 200 crores. ಅದಕ್ಕಾಗಿ ನಾನು ಡಿಸಿಎಂ ಅವರ ಹತ್ತಿರ ಮಾತನಾಡುತ್ತೇನೆ. ಇದು ನಾನ್ ಪ್ಲಾನ್ ಆಗಿರುವುದರಿಂದ ಹೆಚ್ಚಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಿ ನಾವು ಹೆಚ್ಚು ಹಣವನ್ನು ಖರ್ಚು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಶಾಸಕರ ಸಭೆಯನ್ನು ಕೂಡಲೇ ಕರೆಯುತ್ತೇವೆ.

ಶ್ರೀ ಬಿ.ನಂಜಾಮರಿ: ಮಾನ್ಯ ಉಪಾಧ್ಯಕ್ಷರೆ, ತಿಪಟೂರು ಮತ್ತು ಅರಸಿಕೆರೆಗೆ ನೀರು ಇಲ್ಲ, ಟ್ಯಾಂಕ್ ನೀರು ಖಾಲಿಯಾಗಿದೆ. ಹಿಂದಿನ ಅಧಿವೇಶನದಲ್ಲಿ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ನೀವು ಅಲ್ಲಿ ನೀರು ಕೊಡದಿದ್ದರೆ ವಿಧಾನಸೌಧದ ಹತ್ತಿರ ಬಂದು ಕುಳಿತುಕೊಳ್ಳುತ್ತಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷರು: ಮಾನ್ಯ ಸಚಿವರು ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಸಿ.ಎನ್.ಪುಟ್ಟೇಗೌಡ: ಮಾನ್ಯ ಉಪಾಧ್ಯಕ್ಷರೆ, ಬಾಗೂರು ನವಿಲೆಯ ಲಿಫ್ಟ್ ಇರಿಗೇಷನ್ ಆಗಲಿಲ್ಲ. ನೀವು 9 ಕೋಟಿ ರೂಪಾಯಿಗಳನ್ನು ಯಾವಾಗ ಖರ್ಚು ಮಾಡುತ್ತೀರಿ? ನಾವು ವಿಧಾನಸೌಧಕ್ಕೆ ಹೊರೆಯಾಗಿಲ್ಲ. ಆದುದರಿಂದ ಇದರ ಬಗ್ಗೆ ಸೀರಿಯಸ್ ಆಗಿ ಗಮನ ಕೊಟ್ಟು ಈ ಲಿಫ್ಟ್ ಇರಿಗೆಷನ್‌ಗೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಬೇಕು ಮತ್ತು ಪವರ್ ಸಪ್ಲೈಗೆ ಒಂದೂಕಾಲು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದನ್ನು ಇನ್ನು ಕ್ಲಿಯರ್ ಮಾಡಿಲ್ಲ. ಪವರ್ ಕೆಲಸವನ್ನು ಇನ್ನು ಶುರು ಮಾಡಿಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ಗಮನ ಹರಿಸಬೇಕು.

ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಶ್ರೀ ರಾಮದೇವರ ನಾಲೆಯ ಬಗ್ಗೆ ನೀರಾವರಿ ಸಚಿವರು ಕ್ಲಾರಿಫಿಕೇಷನ್ ಕೊಟ್ಟಿಲ್ಲ.

ಉಪಾಧ್ಯಕ್ಷರು: ತಮಗೆ ನಾನು ಹೇಗೆ ಕನ್ವಿನ್ಸ್ ಮಾಡಬೇಕೆಂದು ಅರ್ಥವಾಗುತ್ತಾ ಇಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಜೆಡಿಎಲ್‌ಪಿ ಸಭೆಗಳು ನಡೆಯುತ್ತಿಲ್ಲವೆಂದು ನನಗನಿಸುತ್ತಿದೆ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಶಾಸಕರುಗಳ ಸಭೆಯನ್ನು ಕರೆಸಿ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ, ತಾವು ಬೇಡಿಕೆಗಳ ಮೇಲೆ ಮಾತನಾಡುವಾಗ ಮಾತನಾಡಿ, ತಾವೆಲ್ಲರೂ ಹೀಗೆ ಮಾತನಾಡಿದರೆ ಹೇಗೆ? ಸಭೆಗೆ ನಿಯಮವಿದೆ, ತಾವು ನೋಟೀಸ್ ಕೊಡಬೇಕು. ಈಗ ಸದನವನ್ನು 3 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1.55ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಪುನಃ ಮಧ್ಯಾಹ್ನ 3-20 ಗಂಟೆಗೆ ಪ್ರಾರಂಭವಾಯಿತು)

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ ಅವರು ಅಧ್ಯಕ್ಷರ ಪೀಠವನ್ನಲಂಕರಿಸಿದ್ದರು)

(ಈ) ಕಾವೇರಿ ಕಣಿವೆ ಯೋಜನೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವ ಬಗ್ಗೆ.

ಉಪಾಧ್ಯಕ್ಷರು: ಈಗ ಬೇಡಿಕೆಯ ಮೇಲೆ ಶ್ರೀಯುತರುಗಳಾದ ವಾಟಾಳ್ ನಾಗರಾಜ್ ರವರು, ಶ್ರೀ ರಾಮರೆಡ್ಡಿಯವರು ಮತ್ತು ಪುಟ್ಟಣ್ಣಯ್ಯನವರು ಮಾತನಾಡಿ ಆದ ಮೇಲೆ ಸರ್ಕಾರದಿಂದ ಉತ್ತರವನ್ನು ಕೊಡಿಸುವುದು. ಇದು ಈಗಿನ ಕಾರ್ಯಕ್ರಮವಾಗಿರುತ್ತದೆ.

+ ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ): ಮಾನ್ಯ ಉಪಾಧ್ಯಕ್ಷರೆ, ಕಾವೇರಿ ವಿಚಾರದ ಬಗ್ಗೆ ನಮ್ಮ ಸ್ನೇಹಿತರುಗಳೆಲ್ಲಾ ಪ್ರಸ್ತಾಪ ಮಾಡಿದ್ದು ಆ ವಿಚಾರ ಇನ್ನೂ ಮುಗಿದಿಲ್ಲ. ಅದು ಇನ್ನೂ ಜೀವಂತವಾಗಿದೆ. ಅದಕ್ಕೋಸ್ಕರ ಆ ವಿಚಾರ ಮುಗಿದ ಮೇಲೆ ಬೇಡಿಕೆ ಮೇಲೆ ಚರ್ಚೆ ಮಾಡಲು ಶ್ರೀ ವಾಟಾಳ್ ನಾಗರಾಜ್‌ರವರಿಗೆ ಅವಕಾಶ ಮಾಡಿಕೊಡಿ ಎಂದು ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ.

ಉಪಾಧ್ಯಕ್ಷರು: ನಿನ್ನೆ ಬೇಡಿಕೆ ಮೇಲೆ ಮಾತನಾಡಿ ಪೂರ್ತಿಯಾಗಿ ಮುಗಿದಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರೇ, ತಾವು ಈಗ ಬೇಡಿಕೆ ಮೇಲೆ ಮಾತನಾಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ: ಕಾವೇರಿ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ತಾವು ನೋಟೀಸ್ ಕಳುಹಿಸಿಕೊಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ: ಆಗ ಎಲ್ಲರಿಗೂ ಕಾವೇರಿ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಆ ಚರ್ಚೆ ಇನ್ನೂ ಪೂರ್ಣಗೊಂಡಿಲ್ಲ.

ಉಪಾಧ್ಯಕ್ಷರು: ಅದು ಆಗಲೇ ಚರ್ಚೆಯಾಗಿ ಮುಗಿದಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಇನ್ನೂ ಮುಗಿದಿಲ್ಲ. ತಾವು ಮುಗಿದಿದೆ ಎಂದು ಹೇಳಿದರೆ ಹೇಗೆ? ನೀವು ನಮಗೆ ಸಹಕಾರ ಕೊಡದಿದ್ದರೆ ಹೇಗೆ ಆಗುತ್ತದೆ? ಇದು ಒಬ್ಬ ಇಬ್ಬರ ಪ್ರಶ್ನೆ ಅಲ್ಲ. ಕಾವೇರಿ ಕಣಿವೆ ಭಾಗದಲ್ಲಿ ಬರತಕ್ಕಂಥ ಎಲ್ಲಾ ಶಾಸಕರ ಸಮಸ್ಯೆ ಇದು ಆಗಿರುತ್ತದೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅಪ್ಪಣೆ ಕೊಡಬೇಕು. ಈಗ ಒಬ್ಬರು ಅಥವಾ ಇಬ್ಬರು ಶಾಸಕರು ಕೇಳಿದ್ದರೆ ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು ತಾವು ಹೇಳಬಹುದಾಗಿತ್ತು. ಕಾವೇರಿ ಕಣಿವೆಯ ಎಲ್ಲಾ ಶಾಸಕರು ಒಕ್ಕೊರಲಿನಿಂದ 'ನಮಗೆ